# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | (892) 95 |
| ಸದಸ್ಯರ ಹೆಸರು | : | ಶ್ರೀ ಡಿ.ಟಿ. ಶ್ರೀನಿವಾಸ್ |
| ಉತ್ತರಿಸುವ ದಿನಾಂಕ | : | 11.03.2026 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಯಲಹಂಕ ತಾಲ್ಲೂಕಿನ ಗಂಟಿಗಾನಹಳ್ಳಿಯ ಸರ್ವೇ ನಂಬರ್ 16, 17 ಮತ್ತು 19ರಲ್ಲಿ ಮಾಜಿ ಸೈನಿಕರ ಕುಟುಂಬಗಳಿಗೆ ವಿಶೇಷ ಆಶ್ರಯ ಯೋಜನೆಯಡಿ ನಿವೇಶನ ನಿರ್ಮಾಣ ಮಂಜೂರು ಮಾಡಲು 15 ಎಕರೆ 16 ಗುಂಟೆ ಮಂಜೂರು ಮಾಡಿ ಹಸ್ತಾಂತರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ | ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು, ಯಲಹಂಕ ಹೋಬಳಿ, ಗಂಟಿಗಾನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗಂಟಿಗಾನಹಳ್ಳಿ ಗ್ರಾಮದ ಸರ್ವೇ ನಂ.13 ರಲ್ಲಿ ಒಟ್ಟು 38-01 ಎ/ಗು ಪೈಕಿ 19-10 ಎ/ಗು ಸರ್ವೆ ನಂ: 16 ರಲ್ಲಿ ಒಟ್ಟು 11-13 ಎ/ಗು ಪೈಕಿ 9-03 ಎ/ಗು ಸರ್ವೆ ನಂ: 17 ರಲ್ಲಿ 3-26 ಎ/ಗು ಸರ್ವೆ ನಂ. 18 ರಲ್ಲಿ 1-38 ಎ/ಗು ಮತ್ತು ಸರ್ವೆ. ನಂ. 19 ರಲ್ಲಿ 2-26 ಎ/ಗು ರಲ್ಲಿನ ಒಟ್ಟು 38-33 ಎ/ಗು ಜಮೀನನ್ನು ಆಶ್ರಯ ಯೋಜನೆಯಡಿ ಮನೆಗಳ ನಿರ್ಮಾಣ ಮಾಡಿ ಫಲಾನುಭವಿಗಳಿಗೆ ಹಂಚಿಕೆ ಮಾಡಲು ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತಕ್ಕೆ ಕಾಯ್ದಿರಿಸಿ ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆಯವರ ಆದೇಶ ಸಂಖ್ಯೆ: ಎಲ್.ಎನ್.ಡಿ(ಎನ್.ಎ)/ಸಿ.ಆರ್/60/2003-04, ದಿನಾಂಕ: 07.02.2004 ರಂತೆ ಭೂ ಮಂಜೂರಾತಿ ಮಾಡಲಾಗಿರುತ್ತದೆ. ಅದರಂತೆ ತಹಶೀಲ್ದಾರ್ ರವರ ನಮೂನೆ ಸಂಖ್ಯೆ: ಆಶ್ರಯ/ಸಿಆರ್/65,66/2003-04ರಂತೆ ದಿನಾಂಕ: 16.02.2004 ರಂದು ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಹಸ್ತಾಂತರಿಸಿರುತ್ತಾರೆ.<br><br>ಮುಂದುವರೆದು ಜಿಲ್ಲಾಧಿಕಾರಿಯವರ ಪತ್ರದ ಸಂಖ್ಯೆ: ಆಶ್ರಯ/ಸಿಆರ್/29/2014-15, ದಿನಾಂಕ: 07.01.2017 ರಂತೆ ವಿಶೇಷ ಆಶ್ರಯ ಯೋಜನೆಯಡಿ ಮಾಜಿ ಸೈನಿಕರಿಗೆ ನಿವೇಶನ ಹಂಚಿಕೆ ಮಾಡಲು ಮಂಜೂರು ಮಾಡಿದ್ದು, ಅದರಂತೆ ತಹಶೀಲ್ದಾರ್ ಯಲಹಂಕ ತಾಲ್ಲೂಕು ರವರ ಪತ್ರ ಸಂಖ್ಯೆ: ಎಲ್.ಎನ್.ಡಿ(ಎನ್.ಎ)/ಸಿ.ಆರ್/655/2014-15 ಮತ್ತು ಎಲ್.ಎನ್.ಡಿ(ವೈ)/ಸಿ.ಆರ್/76/2020-21, ದಿನಾಂಕ: 18.08.2021ರಂತೆ ಸರ್ವೆ ನಂ. 16 ರಲ್ಲಿ 9-03 ಎ/ಗು, 17 ರಲ್ಲಿ 3-26 ಎ/ಗು, ಮತ್ತು 19 ರಲ್ಲಿ 2-26 ಎ/ಗು ಒಟ್ಟು 15-15 ಎ/ಗು ಜಮೀನನ್ನು ವಿಶೇಷ ಆಶ್ರಯ ಯೋಜನೆಯಡಿ ಮಾಜಿ ಸೈನಿಕರಿಗೆ ನಿವೇಶನ ಹಂಚಿಕೆ ಮಾಡಲು ಕಾರ್ಯ ನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ರವರ ಹೆಸರಿಗೆ ಪಹಣಿ ಇಂಡೀಕರಣ ಮಾಡಿ ದಿನಾಂಕ: 18.08.2021ರಲ್ಲಿ ಕಾರ್ಯನಿರ್ವಾಹಣಾಧಿಕಾರಿ ತಾಲ್ಲೂಕು ಪಂಚಾಯಿತಿಗೆ ಹಸ್ತಾಂತರ ಮಾಡಲಾಗಿದೆ. |
| ಆ) | ಈ ಸರ್ವೇ ನಂಬರ್ 16, 17 ಮತ್ತು 19 ಜಮೀನುಗಳಲ್ಲಿ ನಿವೇಶನವನ್ನು ನಿರ್ಮಿಸಲು ಯಾವ ಕ್ರಮಗಳನ್ನು ಜರುಗಿಸಲಾಗಿದೆ; ಪ್ರಸ್ತುತ ಯಾವ ಹಂತದಲ್ಲಿದೆ. | ಕಾರ್ಯನಿರ್ವಾಹಕ ಅಧಿಕಾರಿಗಳು ಯಲಹಂಕ ತಾಲ್ಲೂಕು ಪಂಚಾಯಿತಿ ರವರ ವರದಿಯನ್ವಯ ಯಲಹಂಕ ತಾಲ್ಲೂಕು, ಯಲಹಂಕ ಹೋಬಳಿ, ಗಂಟಿಗಾನಹಳ್ಳಿ ಗ್ರಾಮದ ಸರ್ವೆ ನಂ: 16, 17, 19 ರಲ್ಲಿ 15-15 ಎಕರೆ/ಗುಂಟೆ ಕಾಯ್ದಿರಿಸಿದ ಜಮೀನು ಈಗಾಗಲೇ ಕಾರ್ಯನಿರ್ವಾಹಕ ಅಧಿಕಾರಿಗಳು ಯಲಹಂಕ ತಾಲ್ಲೂಕು ಪಂಚಾಯಿತಿ ರವರಿಗೆ ಹಸ್ತಾಂತರವಾಗಿದ್ದು, ಸದರಿ ಸರ್ವೆ ನಂ.ಗಳಲ್ಲಿನ ಒಟ್ಟು 15-15 ಎ/ಗು ಜಮೀನಿನ ಪೈಕಿ |

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| | | **ಸರ್ವೇ ನಕ್ಷೆಯಂತೆ ಸರ್ವೇ ನಂ.16 ರಲ್ಲಿನ 9-03 ಎ/ಗು ಪ್ರದೇಶದಲ್ಲಿ**<br><br>1. 3-23 ಎ/ಗು ವಿಸ್ತೀರ್ಣದಲ್ಲಿ ಸರ್ವೇ ನಂ.13 ರಲ್ಲಿ ಮಂಜೂರಾಗಿರುವ ರೈತರು ಅನುಭವದಲ್ಲಿದ್ದಾರೆ.<br>2. 0-09.5 ಎ/ಗು ವಿಸ್ತೀರ್ಣದಲ್ಲಿ ಒತ್ತುವರಿ ಇರುತ್ತದೆ.<br>3. 0-16.5 ಎ/ಗು ಪ್ರದೇಶದಲ್ಲಿ ಸ್ಮಶಾನ ಇರುತ್ತದೆ.<br>4. 0-39 ಎ/ಗು ವಿಸ್ತೀರ್ಣವು ಖಾಲಿ ಇದ್ದು, ಸದರಿ ಜಾಗವನ್ನು ಸಮತಟ್ಟು ಗೊಳಿಸಲಾಗಿರುತ್ತದೆ.<br>5. ಬಾಕಿ ವಿಸ್ತೀರ್ಣದಲ್ಲಿ ರಾಜೀವ್ ಗಾಂಧಿ ವಸತಿ ನಿಗಮದಿಂದ ನಿರ್ಮಿಸಿರುವ ಗುಂಪು ಮನೆಗಳು ಹಾಗೂ ಮುಖ್ಯ ರಸ್ತೆಯು ಸದರಿ ಸರ್ವೇ ನಂಬರ್‌ನಲ್ಲಿ ಹಾದು ಹೋಗಿರುತ್ತದೆ |
| | | **ಸರ್ವೇ ನಕ್ಷೆಯಂತೆ ಸರ್ವೇ ನಂ.17 ರಲ್ಲಿನ 3-26 ಎ/ಗು ಪ್ರದೇಶದಲ್ಲಿ**<br><br>1. 0-17 ಎ/ಗು ಪ್ರದೇಶದಲ್ಲಿ ಸ್ಮಶಾನ ಇರುತ್ತದೆ<br>2. 0-06 ಎ/ಗು ವಿಸ್ತೀರ್ಣದಲ್ಲಿ ದೇವಸ್ಥಾನಗಳು ಇರುತ್ತದೆ.<br>3. 1-22.5 ಎ/ಗು ವಿಸ್ತೀರ್ಣವು ಖಾಲಿ ಇರುತ್ತದೆ.<br>4. ಉಳಿಕೆ ವಿಸ್ತೀರ್ಣದಲ್ಲಿ ರಾಜೀವ್ ಗಾಂಧಿ ವಸತಿ ನಿಗಮದಿಂದ ನಿರ್ಮಿಸಿರುವ ಗುಂಪು ಮನೆಗಳು ಹಾಗೂ ಮುಖ್ಯ ರಸ್ತೆಯು ಸದರಿ ಸರ್ವೇ ನಂಬರ್‌ನಲ್ಲಿ ಹಾದುಹೋಗಿರುತ್ತದೆ. |
| | | **ಸರ್ವೇ ನಕ್ಷೆಯಂತೆ ಸರ್ವೇ ನಂ.19 ರಲ್ಲಿನ 2-26 ಎ/ಗು ಪ್ರದೇಶದಲ್ಲಿ**<br><br>1. 0-12.5 ಎ/ಗು ವಿಸ್ತೀರ್ಣದಲ್ಲಿ ಒತ್ತುವರಿ ಇರುತ್ತದೆ.<br>2. 1-36.5 ಎ/ಗು ವಿಸ್ತೀರ್ಣವು ಖಾಲಿ ಇದ್ದು, ಸದರಿ ಜಾಗವನ್ನು ಸಮತಟ್ಟು ಗೊಳಿಸಲಾಗಿರುತ್ತದೆ.<br>3. ಉಳಿಕೆ ವಿಸ್ತೀರ್ಣದಲ್ಲಿ ಮುಖ್ಯ ರಸ್ತೆಯು ಸದರಿ ಸರ್ವೇ ನಂಬರ್‌ನಲ್ಲಿ ಹಾದುಹೋಗಿರುತ್ತದೆ. |
| | | ಸರ್ವೆ ನಂ.16 ಮತ್ತು 17 ರಲ್ಲಿ ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದಡಿಯಲ್ಲಿ ನಿರ್ಮಿಸಿರುವ 138 ಗುಂಪು ಮನೆಗಳ ಪೈಕಿ ಈಗಾಗಲೇ RGHCLಗೆ ವಂತಿಕೆ ಪಾವತಿ ಮಾಡಿರುವ ಹೆಬ್ಬಾಳ ವಿಧಾನಸಭಾ ಕ್ಷೇತ್ರದ 26 ಫಲಾನುಭವಿಗಳಿಗೆ ಮನೆಗಳ ಹಂಚಿಕೆ ಸಂಬಂಧ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. |
| | | ಪ್ರಸ್ತುತ ಸರ್ವೇ ನಂ.13 ರಲ್ಲಿ ಮಂಜೂರಾಗಿ ಸರ್ವೇ ನಂಬರ್.16 ರಲ್ಲಿ 3-23 ಎ/ಗು ವಿಸ್ತೀರ್ಣದಲ್ಲಿ ಅನುಭವ ವ್ಯತ್ಯಾಸ ಇರುವ ರೈತರುಗಳ ಪ್ರಕರಣವನ್ನು ಇತ್ಯರ್ಥ ಮಾಡಲು ಬಾಕಿ ಇದ್ದು, ಖಾಲಿ ಜಾಗದ ಕೆಲವು ಭಾಗ ಸಮತಟ್ಟು ಮಾಡಿದ್ದು, ಯಾವುದೇ ನಿವೇಶನ ರಚಿಸಿರುವುದಿಲ್ಲ. |

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| ಇ) | ಎಷ್ಟು ನಿವೇಶನಗಳನ್ನು ಇದುವರೆಗೆ ನಿರ್ಮಿಸಲಾಗಿದೆ; ಅದರಲ್ಲಿ ಎಷ್ಟು ನಿವೇಶನಗಳನ್ನು ಮಾಜಿ ಸೈನಿಕರ ಕುಟುಂಬಗಳಿಗೆ ವಿತರಿಸಲಾಗಿದೆ; ವಿತರಿಸದೆ ಇದ್ದಲ್ಲಿ ಕಾರಣಗಳೇನು; | ಕಾರ್ಯನಿರ್ವಾಹಕ ಅಧಿಕಾರಿಗಳು ಯಲಹಂಕ ತಾಲ್ಲೂಕು ಪಂಚಾಯಿತಿ ರವರ ವರದಿಯನ್ವಯ<br>• ಇದುವರೆವಿಗೂ ಯಾವುದೇ ನಿವೇಶನಗಳನ್ನು ವಿಂಗಡಿಸಿ ಬಡಾವಣೆ ರಚಿಸಿರುವುದಿಲ್ಲ.<br>• ನಿವೇಶನ ನೀಡಲು ಕೋರಿ ಮಾಜಿ ಸೈನಿಕ ಸಂಘಗಳು ಮತ್ತು ಮಾಜಿ ಸೈನಿಕರು ಜಿಲ್ಲಾಧಿಕಾರಿಗಳ ಕಚೇರಿ ಮೂಲಕ, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಮೂಲಕ ಹಾಗೂ ಪ್ರತ್ಯೇಕವಾಗಿ ಒಟ್ಟು 253 ಅರ್ಜಿಗಳನ್ನು ಸಲ್ಲಿಸಿರುತ್ತಾರೆ.<br>• ಯಾವುದೇ ಮಾಜಿ ಸೈನಿಕ ಫಲಾನುಭವಿಗಳಿಗೆ ನಿವೇಶನ ವಿತರಿಸಿರುವುದಿಲ್ಲ.<br>• ಸರ್ವೇ ನಂ.13 ರಲ್ಲಿನ ಮಂಜೂರಾಗಿ ಸರ್ವೇ ನಂಬರ್.16 ರಲ್ಲಿ ಅನುಭವದಲ್ಲಿ ಇರುವ ರೈತರಿಗೆ ಸರ್ವೇ ನಂ.13 ರಲ್ಲಿ ಜಾಗ ಗುರುತಿಸುವ ಸರ್ವೇ ಕಾರ್ಯ ನಡೆಯುತ್ತಿದ್ದು ಸದರಿ ಕಾರ್ಯ ಪೂರ್ಣಗೊಳಿಸಿದ ನಂತರ ಕ್ರಮವಹಿಸಲಾಗುವುದು. |
| ಈ) | ಸರ್ಕಾರದ ಮಂಜೂರು ಮಾಡಿರುವ ಜಮೀನಿನಲ್ಲಿ ಮಾಜಿ ಸೈನಿಕರ ಕುಟುಂಬಗಳಿಗೆ ನಿವೇಶನ ನಿರ್ಮಿಸಿ ನೀಡದೆ ಇರುವ ಅಡಚಣೆಗಳೇನು; | ಸರ್ವೇ ನಂ.13 ರಲ್ಲಿ ಮಂಜೂರಾಗಿ ಸರ್ವೇ ನಂ.16 ರಲ್ಲಿ ಅನುಭವದಲ್ಲಿ ಇರುವ ರೈತರಿಗೆ ಸರ್ವೇ ನಂ.13 ರಲ್ಲಿ ಜಾಗ ಗುರುತಿಸುವ ಸರ್ವೇ ಕಾರ್ಯ ನಡೆಯುತ್ತಿದೆ. ಸದರಿ ಕಾರ್ಯ ಪೂರ್ಣಗೊಳಿಸಿದ ನಂತರ ಕ್ರಮವಹಿಸಲಾಗುವುದು. |
| ಉ) | ಈ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ತೆಗೆದುಕೊಂಡ ಕ್ರಮಗಳೇನು; | |
| ಊ) | ನಿವೇಶನಗಳನ್ನು ನಿರ್ಮಾಣ ಮಾಡಿ ಹಂಚಿಕೆ ಮಾಡದೇ ಇರುವ ಅಧಿಕಾರಿಗಳ ವಿರುದ್ಧ ಸರ್ಕಾರ ತೆಗೆದುಕೊಂಡಿರುವ ಶಿಸ್ತು ಕ್ರಮಗಳೇನು? | ನಿವೇಶನಗಳನ್ನು ನಿರ್ಮಾಣ ಮಾಡಿ ಹಂಚಿಕೆ ಮಾಡದೇ ಇರುವ ಬಗ್ಗೆ ಪರಿಶೀಲಿಸಿ ಕ್ರಮವಹಿಸಲಾಗುವುದು. |

ಸಂಖ್ಯೆ: ಆರ್‌ಡಿ 37 ಎಲ್‌ಜಿಕ್ಯೂ 2026.

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು